

# ಸನ್ನಿಧಾನಂ

ಶಬರಿಮಲೆ ಮಂಡಲ ಮಕರವಿಳಕ್ಕ್ ತೀರ್ಥಾಟನೆ ಕಾಲಾವಧಿಯಲ್ಲಿ ತಿಳಿದುಕೊಳ್ಳಲು

GOVERNMENT OF KERALA
INFORMATION PUBLIC RELATIONS DEPARTMENT
DEVASWAM DEPARTMENT
e Bulletin

https://sabarimalaonline.org/#/darshanAvailability

https://sabarimalaonline.org/#/login

ಈ ವರ್ಷದ (೨೦೨೨-೨೩) ಶಬರಿಮಲೆ ಮಂಡಲ ಮಕರಜ್ಯೋತಿ ತೀರ್ಥಾಟನೆ ನವಂಬರ್ ೧೬ ರಂದು ಸಂಜೆ ಆರಂಭಗೊಳ್ಳಲಿದೆ. ವೃಶ್ಚಿಕ ಮಾಸದ ಉದಯಕ್ಕೆ ಒಂದು ದಿನ ಮುಂಚಿತ (ನವಂಬರ್ ೧೬) ಸಂಜೆ ೫ ಗಂಟೆಗೆ ನಡೆ ಬಾಗಿಲು ತೆರೆಯಲಾಗುವುದು. ನವಂಬರ್ ೧೭ ರಿಂದ ಡಿಸೆಂಬರ್ ೨೭ರ ವರೆಗೆ ಮಂಡಲ ಉತ್ಸವಕಾಲ. ಮಂಡಲ ಪೂಜೆ ಡಿಸೆಂಬರ್ ೨೭ ರಂದು ನಡೆಯಲಿದೆ. ಡಿಸೆಂಬರ್ ೨೭ ರಂದು ರಾತ್ರಿ ನಡೆ ಬಾಗಿಲು ಮುಚ್ಚಲಾಗುವುದು.

ಮಕರಜ್ಯೋತಿ ಉತ್ಸವಕ್ಕಾಗಿ ಡಿಸೆಂಬರ್ ೩೦ ರಂದು ಸಂಜೆ ನಡೆ ಬಾಗಿಲು ತೆರೆಯಲಾಗುವುದು. ತೀರ್ಥಾಟನೆ ೨೦೨೩ ಜನವರಿ ೨೦ ರವರೆಗೆ ಮುಂದುವರಿಯಲಿದೆ. ಜನವರಿ ೧೪ ರಂದು ಇತಿಹಾಸ ಪ್ರಸಿದ್ಧವಾದ ಮಕರ ಜ್ಯೋತಿ ದರ್ಶನ. ಮಕರ ಜ್ಯೋತಿ ಆಚರಣೆಗಳ ಬಳಿಕ ಜನವರಿ ೨೦ ರಂದು ಬೆಳಿಗ್ಗೆ ಗರ್ಭಗುಡಿಯ ಬಾಗಿಲು ಮುಚ್ಚಲಾಗುವುದು.

ವರ್ಚುವಲ್ ಕ್ಯೂ: ಶಬರಿಮಲೆ ಶ್ರೀ ಅಯ್ಯಪ್ಪ ದರ್ಶನಕ್ಕಾಗಿ ತಲುಪುವ ಅಯ್ಯಪ್ಪ ಭಕ್ತರಿಗಾಗಿ ತಿರುವಿದಾಂಕೂರು ದೇವಸ್ವಂ ಬೋರ್ಡ್ ಆನ್ಲೈನ್ ಬುಕ್ಕಿಂಗ್ ವ್ಯವಸ್ಥೆ ಸಿದ್ಧಪಡಿಸಿದೆ.

ಶಬರಿಮಲೆ ತೀರ್ಥಾಟನೆಗಾಗಿ ತಲುಪುವ ಅಯ್ಯಪ್ಪ ಭಕ್ತರು ವರ್ಚುವಲ್ ಕ್ಯೂ ನೋಂದಾವಣೆ ಪೂರ್ತಿಗೊಳಿಸಬೇಕಾಗಿರುವುದು ಖಡ್ಡಾಯವಾಗಿದೆ.



# ಶಬರಿಮಲೆ ಮಂಡಲ ಮಕರಜ್ಯೋತಿ ತೀರ್ಥಾಟನೆ

## ಕೇರಳದ ವಿವಿಧ ಜಿಲ್ಲೆಗಳ ൧൨ ಕೇಂದ್ರಗಳಲ್ಲಿ ಅಯ್ಯಪ್ಪ ಭಕ್ತರಿಗಾಗಿ ಸ್ಪೋಟ್ ಬುಕ್ಕಿಂಗ್ ವ್ಯವಸ್ಥೆ ಸಿದ್ಧಪಡಿಸಲಾಗಿದೆ



### ಸ್ಪೋಟ್ ಬುಕ್ಕಿಂಗ್

**ತಿರುವನಂತಪುರ**
ಶ್ರೀಕಂಠೇಶ್ವರ ಶಿವಕ್ಷೇತ್ರ

**ಕೊಲ್ಲಂ**
ಮಹಾಗಣಪತಿ ಕ್ಷೇತ್ರಂ-ಕೊಟ್ಟಾರಕ್ಕರ

**ಪತ್ತನಂತಿಟ್ಟ**
ನಿಲಯ್ಕಲ್ ಬೇಸ್ ಕ್ಯಾಂಪ್
ಧರ್ಮಶಾಸ್ತಾ ಕ್ಷೇತ್ರ, ಪಂದಳಂ
ಪಂಪಾ-ವಲಿಯಾನವಟ್ಟಂ

**ಆಲಪ್ಪುಳ**
ರೈಲ್ವೇಸ್ಟೇಶನ್, ಚೆಂಗನ್ನೂರು

**ಕೋಟ್ಟಯಂ**
ಎರುಮೇಲಿ ಕ್ಷೇತ್ರ
ಏಟ್ಟುಮಾನೂರ್ ಮಹಾದೇವ ಕ್ಷೇತ್ರ
ವೈಕ್ಕಂ ಮಹಾದೇವ ಕ್ಷೇತ್ರ

**ಎರ್ನಾಕುಳಂ**
ಪೆರುಂಬಾವೂರ್
ಕೀಯಿಲ್ಲಂ

**ಇಡುಕ್ಕಿ**
ಕುಮಳಿ



## ಸೇವಾ ದರಗಳು

| | |
|---|---|
| ತುಪ್ಪಾಭಿಷೇಕ | - ൧ ತೆಂಗಿನಕಾಯಿ |
| (ಮುದ್ರೆ ಒಂದರ) | - ൧൦ ರೂಪಾಯಿ |
| ಅಷ್ಟಾಭಿಷೇಕ | - ൬൦൦൦/ ರೂಪಾಯಿ |
| ಗಣಪತಿ ಹೋಮ | - ൩൨൫/ ರೂಪಾಯಿ |
| ಉಷಪೂಜೆ | - ൧൫൦൦/ ರೂಪಾಯಿ |
| ಮಧ್ಯಾಹ್ನ ಪೂಜೆ | - ൩൦൦൦/ ರೂಪಾಯಿ |
| ನಿತ್ಯಪೂಜೆ | - ൪൦൦൦/ ರೂಪಾಯಿ |
| ಭಗವತಿ ಸೇವೆ | - ൨൫൦൦/ ರೂಪಾಯಿ |
| ಕಳಭಾಭಿಷೇಕ | - ൩൮,൪൦൦/ ರೂಪಾಯಿ |
| ಮೆಟ್ಟಿಲು ಪೂಜೆ | - ൧,൩൨,൯൦൦/ ರೂಪಾಯಿ |
| ತುಲಾಭಾರ | - *൬൨൫/ ರೂಪಾಯಿ |
| ಪುಷ್ಪಾಭಿಷೇಕ | - ൧൨,൫൦൦/ ರೂಪಾಯಿ |
| ಅಪ್ಪಂ (൧ ಪ್ಯಾಕೆಟ್) | - ൪൫/ ರೂಪಾಯಿ |
| ಅರವಣ (൧ಟಿನ್) | - ൧൦൦/ ರೂಪಾಯಿ |
| ವಿಭೂತಿ ಪ್ರಸಾದ | - ൩൦/ರೂಪಾಯಿ |
| ಬಲಿವಾಡು | - ൨൫/ರೂಪಾಯಿ |
| ಬೆಲ್ಲದಪಾಯಸ | - ൨൫/ರೂಪಾಯಿ |
| ಪಂಚಾಮೃತ | - ൧൨൫/ ರೂಪಾಯಿ |
| ಅಭಿಷೇಕ ತುಪ್ಪ (൧൦൦ ಎಂ.ಎಲ್) | - ൧൦൦/ರೂಪಾಯಿ |
| ನವಗ್ರಹ ಪೂಜೆ | - ൪൫൦/ರೂಪಾಯಿ |
| ಒಂದುಗ್ರಹ ಪೂಜೆ | - ൧൦൦/ರೂಪಾಯಿ |
| ಮಾಲೆ/ವಡಿಪೂಜೆ | - ൨൫/ರೂಪಾಯಿ |
| ನೆಲ್ಪರ | - ൨൦൦/ ರೂಪಾಯಿ |
| ಮಂಞಲ್ಪರ | - ൪൦൦/ರೂಪಾಯಿ |
| ತಂಗಯಂಗಿ ಧಾರಣೆ | - ൧൫,൦൦൦/ ರೂಪಾಯಿ |
| ನೀರಾಜನಂ | - ൧൨൫/ರೂಪಾಯಿ |
| ಇರುಮುಡಿ ಕಟ್ಟುವುದು (ಪಂಪಾ) | - ൩൦൦/ರೂಪಾಯಿ |



## ಶಬರಿಮಲೆ ಪೂಜಾ ಸಮಯ

| | |
|---|---|
| ಮುಂಜಾನೆ | |
| ೩.೦೦ಗಂಟೆಗೆ | ಗರ್ಭಗುಡಿಯ ಬಾಗಿಲು ತೆರೆಯುವುದು, ನಿರ್ಮಾಲ್ಯಂ, ಅಭಿಷೇಕ |
| ೩.೩೦ | ಗಣಪತಿ ಹೋಮ |
| ೩.೩೦ರಿಂದ ೧೧.೩೦ರ ವರೆಗೆ | ತುಪ್ಪಾಭಿಷೇಕ |
| ೭.೩೦ | ಉಷಪೂಜೆ |
| ೧೧ರಿಂದ ೧೧.೩೦ ವರೆಗೆ | ಅಷ್ಟಾಭಿಷೇಕ |
| ೧೨.೩೦ | ಮಧ್ಯಾಹ್ನ ಪೂಜೆ |
| ೧.೦೦ | ನಡೆ ಬಾಗಿಲು ಮುಚ್ಚುವುದು |
| ಸಂಜೆ ೬.೩೦ | ದೀಪಾರಾಧನೆ |
| ೭ ರಿಂದ ೯.೩೦ರ ವರೆಗೆ | ಪುಷ್ಪಾಭಿಷೇಕ |
| ೯.೩೦ರಿಂದ | ಅತ್ತಾಳಪೂಜೆ |
| ೧೧.೦೦ | ಹರಿವರಾಸನಂ |
| | ನಡೆ ಬಾಗಿಲು ಮುಚ್ಚುವುದು |





## ಶಬರಿಮಲೆ ಪ್ಲಾಸ್ಟಿಕ್ ಮುಕ್ತ

ಪ್ಲಾಸ್ಟಿಕ್ ಪೂರ್ಣವಾಗಿ ನಿಷೇಧಿಸಿದ ತೀರ್ಥಾಟನೆ ಕೇಂದ್ರವಾಗಿದೆ ಶಬರಿಮಲೆ. ಭಕ್ತರು ಇರುಮುಡಿ ಕಟ್ಟಿನಲ್ಲಿ ಪ್ಲಾಸ್ಟಿಕ್ ವಸ್ತುಗಳು (ಬಾಟ್ಲಿ, ಕವರ್ ಮೊದಲಾದವುಗಳು) ಹೊರತುಪಡಿಸಬೇಕು.

## ಪಂಪಾ ಮಲಿನಗೊಳಿಸಬಾರದು

ಪಂಪಾನದಿಯಲ್ಲಿ ಬಟ್ಟೆಬರೆಗಳು ಹಾಗೂ ಇತರ ವಸ್ತುಗಳನ್ನು ಉಪೇಕ್ಷಿಸಬಾರದು. ಪುಣ್ಯನದಿಯಾಗಿರುವ ಪಂಪಾವನ್ನು ಮಲಿನಗೊಳಿಸದೆ ಕಾಯ್ದುಕೊಳ್ಳಬೇಕಾಗಿರುವುದು ಭಕ್ತರ ಹೊಣೆಯಾಗಿದೆ.

## ತ್ಯಾಜ್ಯಗಳನ್ನು ಎಲ್ಲೆಡೆಯಲ್ಲಿ ಹಾಕಬಾರದು...

ತ್ಯಾಜ್ಯಗಳನ್ನು ಕಸದ ಬುಟ್ಟಿಗಳಲ್ಲಿ ಅಲ್ಲದೆ ಇತರ ಯಾವುದೇ ಸ್ಥಳದಲ್ಲೂ ಉಪೇಕ್ಷಿಸದಿರಲು ಗಮನಿಸಬೇಕು.

## ಬಹಿರಂಗವಾಗಿ ಬಹಿರ್ದೆಸೆ ಮಾಡಬಾರದು

ಭಕ್ತರು ಬಹಿರಂಗವಾಗಿ ಸಾರ್ವಜನಿಕ ಸ್ಥಳಗಳಲ್ಲಿ ಬಹಿರ್ದೆಸೆ ಮಾಡಬಾರದು. ಅದಕ್ಕೆ ಪಾಯಿಖಾನೆಗಳನ್ನು, ಮೂತ್ರದೊಡ್ಡಿಗಳನ್ನು ಉಪಯೋಗಿಸಿಕೊಳ್ಳಬೇಕು. ಪಂಪಾವನ್ನು, ಸನ್ನಿದಾನವನ್ನು, ಮಲೆ ಏರುವ ದಾರಿಯನ್ನೆಲ್ಲಾ ಶುಚಿಯಾಗಿರಿಸಿಕೊಳ್ಳಬೇಕು.

## ಮದ್ಯ, ಮಾದಕ ಮುಕ್ತ ತೀರ್ಥಾಟನೆ

ತೀರ್ಥಾಟಕರು ಮದ್ಯ ಅಥವಾ ಇತರ ಮಾದಕ ಪದಾರ್ಥಗಳನ್ನು ಉಪಯೋಗಿಸಬಾರದು. ಪಂಪಾ, ಸನ್ನಿಧಾನ, ಕಾನನ ಹಾದಿ ಮೊದಲಾದ ಸ್ಥಳಗಳಲ್ಲಿ ಹೊಗೆ ಬತ್ತಿ ಸೇದಬಾರದು. ಆಯುಧಗಳನ್ನು ಪಟಾಕಿಗಳು ಸೇರಿದಂತೆ ಸ್ಫೋಟಕವಸ್ತುಗಳನ್ನು ಕೈವಶವಿರಿಸಿಕೊಳ್ಳುವುದನ್ನು ಕಡ್ಡಾಯವಾಗಿ ನಿಷೇಧಿಸಲಾಗಿದೆ.

## ಬೆಂಕಿ ಉರಿಸುವಾಗ ಗಮನಿಸಿ

ಅಡುಗೆ ಅನಿಲ ಹಾಗೂ ಸ್ಟೌವನ್ನು ಸನ್ನಿಧಾನದಲ್ಲಿ ಉಪಯೋಗಿಸಬಾರದು. ಉರಿಸಿದರೆ ಅಗತ್ಯ ಮುಗಿದ ಕೂಡಲೇ ನಂದಿಸಬೇಕಾಗಿದೆ.

## ಪೊಲೀಸರ ಸಮೀಪಿಸಬಹುದು

ಸುರಕ್ಷಾ ತಪಾಸಣೆಗಳನ್ನು ಮಾಡುವ ಕೇಂದ್ರಗಳಲ್ಲಿ ಭಕ್ತರು ಸ್ವಯಂ ಪರಿಶೀಲನೆಗೆ ವಿಧೇಯರಾಗಬೇಕಾಗಿದೆ. ಯಾವುದೇ ಸಹಾಯಕ್ಕೆ ಪೊಲೀಸರನ್ನು ಸಮೀಪಿಸಬಹುದು. ಸಂಶಯಾಸ್ಪದವಾಗಿ ಏನಾದರೂ ಕಂಡುಬಂದರೆ ಪೊಲೀಸರಿಗೆ ತಿಳಿಸಬೇಕಾಗಿದೆ.

ಗುಂಪಿನಿಂದ ಬೇರ್ಪಟ್ಟು ಹೋಗುವವರು ಪೊಲೀಸ್ ಎಯ್ಡ್ ಪೋಸ್ಟ್ ಳ ಸಹಾಯ ಪಡೆಯಬಹುದು. ವೃದ್ಧರ, ಮಕ್ಕಳ, ಮಾಳಿಗಪುರಂರ ಕುತ್ತಿಗೆಯಲ್ಲಿ ವಿಳಾಸ ಹಾಗೂ ಫೋನ್ ನಂಬ್ರ ದಾಖಲಿಸಿದ ಗುರುತುಚೀಟಿ ಧರಿಸಬೇಕಾಗಿರುವುದು ಅತ್ಯಗತ್ಯವಾಗಿದೆ.

## ಮೊಬೈಲ್ ಮೆಡಿಕಲ್ ಯೂನಿಟ್ಗಳು

ಆಕ್ಸಿಜನ್ ಪಾರ್ಲರ್ಗಳ, ಮೆಡಿಕಲ್ ಸೆಂಟರ್ಗಳ ಸೇವೆಯನ್ನು ಭಕ್ತರು ಗರಿಷ್ಠವಾಗಿ ಪ್ರಯೋಜನಪಡಿಸಬೇಕಾಗಿದೆ. ಪಂಪಾದಲ್ಲೂ ನಿಲಯ್ಕಲ್ಲಲ್ಲೂ ತುರ್ತು ಚಿಕಿತ್ಸಾ ಸೌಕರ್ಯಗಳಿರುವ ಮೊಬೈಲ್ ಮೆಡಿಕಲ್ ಯೂನಿಟ್ಗಳು ಭಕ್ತರಿಗಾಗಿ ಸಿದ್ಧಪಡಿಸಲಾಗಿದೆ.

# ಹೆಲ್ಪ್ ಲೈನ್

| | |
|---|---|
| ಎಮರ್ಜೆನ್ಸಿ ಆಪರೇಟಿಂಗ್ ಸೆಂಟರ್ | - 04735 202166 |
| ಪಂಪಾ | - 04735203255 |
| ನಿಲಯ್ಕ್ ಲ್ | - 04735 205002 |
| ಪತ್ತನಂತಿಟ್ಟ ಜಿಲ್ಲಾ ವಿಕೋಪ ನಿವಾರಣೆ ಪ್ರಾಧಿಕಾರ | - 04682 322515 |
| ಪಂಪಾ ಪೊಲೀಸ್ ಠಾಣೆ | - 04735 203412 |
| ನಿಲಯ್ಕ್ ಲ್ ಪೊಲೀಸ್ ಠಾಣೆ | - 04735 205207 |
| ಸನ್ನಿದಾನಂ ಪೊಲೀಸ್ ಠಾಣೆ | - 04735 202014 |
| ಪತ್ತನಂತಿಟ್ಟ ಮಹಿಳಾ ಪೊಲೀಸ್ ಠಾಣೆ | - 04682 272100 |
| ಪತ್ತನಂತಿಟ್ಟ ಎಸ್. ಪಿ ಕಚೇರಿ | - 04682 222636 |
| ಎಮರ್ಜೆನ್ಸಿ ಮೆಡಿಕಲ್ ಸೆಂಟರ್ ಕಂಟ್ರೋಲ್ ರೂಮ್ | - 04735 203232 |
| ನಿಲಯ್ಕ್ ಲ್ ಸರಕಾರಿ ಆಸ್ಪತ್ರೆ | - 04735 205202 |
| ಪತ್ತನಂತಿಟ್ಟ ಜಿಲ್ಲಾ ಆಸ್ಪತ್ರೆ-ಶಬರಿಮಲೆ ವಾರ್ಡ್ | - 9188746248 |
| ಸನ್ನಿಧಾನಂ ಸರಕಾರಿ ಆಸ್ಪತ್ರೆ | - 04735 202101 |
| ಸೇಫ್ ಝೋನ್ ಯೋಜನೆ | - 9400044991, 9562318181 |
| ಅಗ್ನಿಶಾಮಕ ದಳ ಸನ್ನಿಧಾನಂ | - 04735 202033 |
| ಅರಣ್ಯ ಇಲಾಖೆ ಸನ್ನಿಧಾನಂ | - 04735 202074 |







## ಭಕ್ತರಿಗಿರುವ ನಿರ್ದೇಶಗಳು

ದರ್ಶನಕ್ಕೆ ತಲುಪುವ ಅಯ್ಯಪ್ಪ ಭಕ್ತರು ಆಚಾರ ಅನುಷ್ಠಾನಗಳನ್ನು ಪಾಲಿಸಬೇಕು ಭಕ್ತರು ನಿಧಾನವಾಗಿ ಬೆಟ್ಟ ಏರಬೇಕು

ಸನ್ನಿದಾನಕ್ಕೆ ತಲುಪಲು ಪರಂಪರಾಗತವಾದ ಹಾದಿ ಮರಕ್ಕೂಟಂ, ಶರಂಕುತ್ತಿ, ನಡಪಂದಲ್ ಉಪಯೋಗಿಸಿರಿ

ಹದಿನೆಂಟು ಮೆಟ್ಟಿಲಿಗೆ ತಲುಪಲು ಸರದಿಯಲ್ಲಿ ನಿಂತುಕೊಳ್ಳಿ

ಕ್ಯೂವಿನಲ್ಲಿ ತಪ್ಪಿಸಿ ಹೋಗುವುದು, ಕ್ಯೂವಿನಲ್ಲಿ ನಿಂತಿರುವಾಗ ಅವಸರ ಮಾಡಬಾರದು.

ಹದಿನೆಂಟು ಮೆಟ್ಟಿಲಲ್ಲಿ ತೆಂಗಿನಕಾಯಿ ಒಡೆಯುವುದು, ಮಂಡಿಯೂರಿ ಹತ್ತಲು ಪ್ರಯತ್ನಿಸಬಾರದು

ಅಯ್ಯಪ್ಪನಿಗೆ ಅರ್ಪಿಸುವ ಕಾಣಿಕೆ ಅಲ್ಲಲ್ಲಿ ಬಿಸಾಡದೆ ಹುಂಡಿಗಳಲ್ಲಿ ಮಾತ್ರವೇ ಹಾಕಿರಿ

ಹಿಂತಿರುಗಿ ಬರುವಾಗ ನಡೆಪಂದಲ್ ಮೇಲ್ಸೇತುವೆ ಉಪಯೋಗಿಸಿರಿ

ಕುಟೀರಕ್ಕಾಗಿರುವ ಸ್ಥಳಗಳಾದ ನಡೆಪಂದಲ್, ಕೆಳಗಿನ ಅಂಗಳವನ್ನು ಕಾಲುದಾರಿಯಾಗಿ ಉಪಯೋಗಿಸಬಾರದು

ಪಂಪಾದಿಂದ ಸನ್ನಿಧಾನಕ್ಕೆ ಪ್ರಯಾಣ ಆರಂಭಿಸುವುದಕ್ಕೆ ಮುಂಚಿತ ಜನಸಂದಣಿಯನ್ನು ತಿಳಿದುಕೊಳ್ಳಲು ಪ್ರಯತ್ನಿಸಿ

ಸನ್ನಿಧಾನದ ಮುಂಭಾಗದಲ್ಲಿ ವಿಶ್ರಮಿಸಬಾರದು

ಡೋಲಿ ಸೇವೆಗಾಗಿ ಪಂಪಾ ದೇವಸ್ವಂ ಅಡ್ಮಿನಿಸ್ಟ್ರೇಟಿವ್ ಕಚೇರಿಯ ಸೇವೆಯನ್ನು ಪ್ರಯೋಜನಪಡಿಸಿಕೊಳ್ಳಿ

ಸೇವೆಗಳಿಗೆ ಹೆಚ್ಚುವರಿ ದರ ನೀಡಬಾರದು

ಕ್ಷೇತ್ರ ಪರಿಸರದಲ್ಲಿ ಮೊಬೈಲ್ ಫೋನ್ಗಳನ್ನು ಉಪಯೋಗಿಸಬಾರದು

ಅನಧಿಕೃತ ವ್ಯಾಪಾರಿಗಳನ್ನು ಪ್ರೋತ್ಸಾಹಿಸಬಾರದು

ಪರವಾನಗಿ ಇರುವ ಅಂಗಡಿಗಳಿಂದ ಮಾತ್ರವೇ ಆಹಾರ ಸಾಮಗ್ರಿಗಳನ್ನು ಖರೀದಿಸಿರಿ

ಅನುಮತಿ ನೀಡಿರುವ ಸ್ಥಳಗಳಲ್ಲಿ ಮಾತ್ರವೇ ವಾಹನಗಳನ್ನು ನಿಲುಗಡೆ ಗೊಳಿಸಿರಿ

DEVASWAM DEPARTMENT
TRAVANCORE DEVASWAM BOARD

MISSION
GREEN SABARIMALA

# ಶಬರಿಮಲೆಯನ್ನು ಪ್ಲಾಸ್ಟಿಕ್ಕಿಂದ ರಕ್ಷಿಸಲು ನಮಗೆ ಕೈ ಜೋಡಿಸುವ



## ಪ್ಲಾಸ್ಟಿಕ್ ಮುಕ್ತ ಶಬರಿಮಲೆ...

- ಶಬರಿಮಲೆ ಶ್ರೀ ಅಯ್ಯಪ್ಪನ ಪೂಂಗಾವನ ಪುಣ್ಯವಾಗಿದೆ. ಇಲ್ಲಿಗೆ ಪ್ಲಾಸ್ಟಿಕ್ ವಸ್ತುಗಳನ್ನು ತರಬಾರದು...
- ಇರುಮುಡಿಕಟ್ಟಿನಲ್ಲಿ ಪ್ಲಾಸ್ಟಿಕ್ ವಸ್ತುಗಳನ್ನು ಪೂರ್ಣವಾಗಿ ಹೊರತುಪಡಿಸಿರಿ...
- ಆಚಾರ ಅನುಷ್ಠಾನ ಪ್ರಕಾರವಿರುವ ವಸ್ತುಗಳನ್ನು ಮಾತ್ರವೇ ಇರುಮುಡಿ ಕಟ್ಟಿನಲ್ಲಿ ತುಂಬಿಸಬೇಕಾಗಿದೆ....
- ಪ್ಲಾಸ್ಟಿಕ್ ಬಾಟ್ಲಿಗಳಿಗೆ ಬದಲಾಗಿ ಇತರ ವ್ಯವಸ್ಥೆಗಳ ಮೂಲಕ ಕುಡಿಯುವ ನೀರನ್ನು ಕೊಂಡೊಯ್ಯಿರಿ....
- ಪ್ಲಾಸ್ಟಿಕ್ ಕ್ಯಾರಿ ಬ್ಯಾಗ್ಗಳ ಬದಲಾಗಿ ಬಟ್ಟೆ ಚೀಲಗಳನ್ನು, ಪೇಪರ್ ಬ್ಯಾಗ್ಗಳನ್ನು ಉಪಯೋಗಿಸಿರಿ....
- ಪುಣ್ಯ ನದಿಯಾದ ಪಂಪಾನದಿಯಲ್ಲಿ ಬಟ್ಟೆಗಳು, ಪ್ಲಾಸ್ಟಿಕ್ ವಸ್ತುಗಳು ಎಂಬಿವುಗಳನ್ನು ಉಪೇಕ್ಷಿಸಬಾರದು...
- ಪ್ಲಾಸ್ಟಿಕ್ ರಹಿತವಾಗಲಿ ಶಬರಿಮಲೆ....